ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.3541/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಚಿದಾನಂದ** | | |
| **ತಂದೇಃಹೆಸರು** | **ರಾಮಕೃಷ್ಣ** | **ಪಿಡಬ್ಲೂಃ** | **1** |
| **ವಯಸ್ಸುಃ** | **50 ವರ್ಷ** | **ಸಿಡಬ್ಲೂಃ** | **1** |
| **ಉದ್ಯೋಗಃ** | **ಖಾಸಗಿ ಕೆಲಸ** | | |
| **ವಾಸ ಸ್ಥಳಃ** | **ಸಿರುಗುಪ್ಪ** | | |

**ದಿನಾಂಕ 08.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

2021 ರಲ್ಲಿ ಕುಮಾರ್ ರವರು ಸಂಜೆ ನನಗೆ ಫೋನ್ ಮಾಡಿ ಅಪಘಾತದ ವಿಷಯವನ್ನು ತಿಳಿಸಿರುತ್ತಾರೆ. ನಂತರ ನಾನು ಆಸ್ಪತ್ರೆಗೆ ಹೋಗಿ ನೋಡಲಾಗಿ ಅದು ನಿಜವಾಗಿತ್ತು, ನನ್ನ ಸಹೋದರ ಮೃತರಾಗಿದ್ದರು. ಪೋಲಿಸರು ಸಹಿ ಮಾಡು ಎಂದಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ದೂರನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಿ.ಪಿ.1 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು

ಗುರುತಿಸಲಾಯಿತು. ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-3 ರಿಂದ 5 ರಂದು ಗುರುತಿಸಲಾಯಿತು. ನಾನು ಯಾವುದೇ ಮರು ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ದಿನಾಂಕಃ25.02.2021 ರಂದು ನಾನು ನಮ್ಮ ಮನೆಯಲ್ಲಿದ್ದಾಗ ಚಾಸಾ-4 ರವರು ನನಗೆ ಫೋನ್ ಮಾಡಿ ತಾನು ಶ್ರೀಪುರಂ ಜಂಕ್ಷನ್‌ನಲ್ಲಿದ್ದಾಗ ನನ್ನ ತಮ್ಮನಾದ ಹನುಮಂತ ಈತನಿಗೆ ಲಾರಿ ಹಿಂದಿನಿಂದ ಅಪಘಾತ ಪಡಿಸಿ, ಆತನಿಗೆ ಭಾರಿ ಗಾಯವಾಗಿರುತ್ತದೆ, ಆತನನ್ನು ಅಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕಳಿಸಿಕೊಟ್ಟಿದ್ದೇವೆಂದು, ಈ ಅಪಘಾತವು ಲಾರಿ ಸಂ.ಕೆ ಎ 04/ಡಿ-2971 ರ ಚಾಲಕ ಅಜಾಗರೂಕತೆಯಿಂದ ಆಗಿರುತ್ತದೆ ಎಂದು & ನರಸಿಂಹ & ರಾಮಾಂಜನೇಯ ರವರು ಸಹ ಸ್ಥಳದಲ್ಲಿದ್ದರು ಎಂದು ತಿಳಿಸಿದ್ದದರು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾನು ಪೋಲಿಸರಿಗೆ ದೂರನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ.

ನಂತರ ನಾನು ತೋರಿಸಿದಂತೆ ಚಾಸಾ-9 & 10 ರವರ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಮಾಡಿ, ಫೋಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ.

ಸದರಿ ವಿಚಾರವಾಗಿ ನಾನು ಮರು ಹೇಳಿಕೆಗಳನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದಿರುವುದರಿಂದ, ಸಾಕ್ಷಿಯು ಪೋಲೀಸರಿಗೆ ನೀಡಿದ ಮರು ಹೇಳಿಕೆಗಳನ್ನು ನಿಪಿ-6 & 7 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಸಿಂಧನೂರು.